All India Radio: Bangalore
National Bulletin In Kannada
28.06.2025 : 7.35AM
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು:

- ನವದೆಹಲಿಯಲ್ಲಿಂದು ಆಚಾರ್ಯ ವಿದ್ಯಾನಂದಜಿ ಮಹಾರಾಜ್ ಶತಮಾನೋತ್ಸವ ಕಾರ್ಯಕ್ರಮ ಉದ್ಘಾಟಿಸಲಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ
- ಕಿಶನ್ ಗಂಗಾ, ರಾಟ್ಲೆ ಜಲವಿದ್ಯುತ್ ಯೋಜನೆ ಕುರಿತ ಮಧ್ಯಸ್ಥಿಕೆ ನ್ಯಾಯಾಲಯ ತೀರ್ಪನ್ನು ತಿರಸ್ಕರಿಸಿದ ಭಾರತ
- ಶ್ರೀಲಂಕಾದ ಅತಿದೊಡ್ಡ ಶಿಪ್‌ಯಾರ್ಡ್‌ನ ಶೇಕಡ ೫೧ರಷ್ಟು ಪಾಲನ್ನು ಸ್ವಾಧೀನಪಡಿಸಿಕೊಳ್ಳಲು ಮಸ್ಗಾಂವ್ ಹಡಗು ನಿರ್ಮಾಣ ಸಂಸ್ಥೆ ನಿರ್ಧಾರ
- ನಾಟಿಂಗ್‌ಹ್ಯಾಮ್‌ನಲ್ಲಿ ಇಂದಿನಿಂದ ಭಾರತ-ಇಂಗ್ಲೆಂಡ್ ಮಹಿಳಾ ಟಿ-೨೦ ಅಂತಾರಾಷ್ಟ್ರೀಯ ಕ್ರಿಕೆಟ್ ಸರಣಿಗೆ ಚಾಲನೆ
- ಮಾಸ್ಟರ್ಸ್ ಕಪ್ ಚೆಸ್; ೨ನೇ ಆವೃತ್ತಿಯಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದಗೆ ಪ್ರಶಸ್ತಿ

********

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ನವದೆಹಲಿಯಲ್ಲಿ ಜೈನ ಧಾರ್ಮಿಕ ಮುಖಂಡ ಹಾಗೂ ಸಾಮಾಜಿಕ ಸುಧಾರಕ ಆಚಾರ್ಯ ವಿದ್ಯಾನಂದಜಿ ಮಹಾರಾಜ್ ಅವರ ಶತಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಈ ವೇಳೆ ಅವರು ಸಮಾರಂಭವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ಆಚಾರ್ಯ ವಿದ್ಯಾನಂದಜಿ ಮಹಾರಾಜ್ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಕೇಂದ್ರ ಸರ್ಕಾರ ಮತ್ತು ಭಗವಾನ್ ಮಹಾವೀರ ಅಹಿಂಸಾ ಭಾರತೀ ಟ್ರಸ್ಟ್ ಸಹಯೋಗದಲ್ಲಿ ಯೋಜಿಸಿರುವ ದೇಶವ್ಯಾಪಿ ಒಂದು ವರ್ಷದ ಆಚರಣೆಗೆ ಈ ಕಾರ್ಯಕ್ರಮದ ಮೂಲಕ ಚಾಲನೆ ದೊರೆಯಲಿದೆ. ಸಮಾಜ ಸುಧಾರಕರಾಗಿದ್ದ ಆಚಾರ್ಯ ವಿದ್ಯಾನಂದಜಿ ಮಹಾರಾಜ್ ಜೈನ ತತ್ವಶಾಸ್ತ್ರ ಮತ್ತು ನೈತಿಕತೆಯ ಕುರಿತು ೫೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದರು. ಜೈನ ದೇಗುಲಗಳ ಪುನಶ್ಚೇತನ ಹಾಗೂ ಪಾಠಶಾಲೆಗಳಲ್ಲಿ ಪ್ರಾಕೃತ ಭಾಷೆ, ಜೈನ ತತ್ವಶಾಸ್ತ್ರ ಮತ್ತು ಸಾಂಪ್ರದಾಯಿಕ ಭಾಷೆಗಳ ಶಿಕ್ಷಣಕ್ಕಾಗಿ ಮಹತ್ವಪೂರ್ಣ ಕೊಡುಗೆ ನೀಡಿದ್ದಾರೆ. ಈ ಶತಮಾನೋತ್ಸವದ ಅಂಗವಾಗಿ ದೇಶದಾದ್ಯಂತ ಸಾಂಸ್ಕೃತಿಕ, ಸಾಹಿತ್ಯ, ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಆಚಾರ್ಯ ವಿದ್ಯಾನಂದಜಿ ಮಹಾರಾಜ್ ಬದುಕು, ದಾರ್ಶನಿಕತೆ ಮತ್ತು ಸಂದೇಶವನ್ನು ಸಾರುವ ಉದ್ದೇಶ ಹೊಂದಿದೆ.

********

ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರದಲ್ಲಿ ನಿನ್ನೆ ಕಿಶನ್‌ಗಂಗಾ ಮತ್ತು ರಾಟ್ಲೆ ಜಲವಿದ್ಯುತ್ ಯೋಜನೆಯ ಕುರಿತು ಮಧ್ಯಸ್ಥಿಕೆ ನ್ಯಾಯಾಲಯ ಹೊರಡಿಸಿದ ತೀರ್ಪನ್ನು ಭಾರತ ತಿರಸ್ಕರಿಸಿದೆ.

೧೯೬೦ರ ಸಿಂಧು ಜಲ ಒಪ್ಪಂದದ ಅಡಿಯಲ್ಲಿ ರಚಿಸಲಾಗಿದೆ ಎನ್ನಲಾದ ಅಕ್ರಮ ಮಧ್ಯಸ್ಥಿಕೆ ನ್ಯಾಯಾಲಯ ನೀಡಿದ ಪೂರಕ ತೀರ್ಪನ್ನು ವಿದೇಶಾಂಗ ಸಚಿವಾಲಯ ವಜಾಗೊಳಿಸಿದೆ. ಭಾರತ ಈ ಮಧ್ಯಸ್ಥಿಕೆ ನ್ಯಾಯಾಲಯದ ಕಾನೂನು ಸಿಂಧುತ್ವವನ್ನು ಎಂದೂ ಗುರುತಿಸಿಲ್ಲ. ಅದರ ರಚನೆ ಸಿಂಧು ಜಲ ಒಪ್ಪಂದದ ಒಂದು ಗಂಭೀರ ಉಲ್ಲಂಘನೆಯಾಗಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಸಿಂಧು ಜಲ ಒಪ್ಪಂದವನ್ನು ಭಾರತ ಸ್ಥಗಿತಗೊಳಿಸಿದೆ. ಗಡಿಯಾಚೆಗಿನ ಭಯೋತ್ಪಾದನೆಗೆ ಪಾಕಿಸ್ತಾನದ ಬೆಂಬಲವನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ. ಈ ವಿಷಯದಲ್ಲಿ ಭಾರತದ ಸಾರ್ವಭೌಮ ನಿರ್ಧಾರವನ್ನು ಪ್ರಶ್ನಿಸುವ ಅಧಿಕಾರ ಯಾವುದೇ ಮಧ್ಯಸ್ಥಿಕೆ ನ್ಯಾಯಾಲಯಕ್ಕೆ ಇಲ್ಲ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

********

ಸರ್ಕಾರಿ ಸ್ವಾಮ್ಯದ ಮಸ್ಗಾಂವ್ ಡಾಕ್ ಹಡಗು ನಿರ್ಮಾಣ ಸಂಸ್ಥೆ - ಎಂಡಿಎಲ್, ಶ್ರೀಲಂಕಾದ ಅತಿದೊಡ್ಡ ಶಿಪ್‌ಯಾರ್ಡ್ ಕೊಲಂಬೋ ಡಾಕ್‌ಯಾರ್ಡ್, ಪಿಎಲ್‌ಸಿಯಲ್ಲಿ ಶೇಕಡ ೫೧ರಷ್ಟು ಪಾಲನ್ನು ಸುಮಾರು ೫೨.೯೬ ದಶಲಕ್ಷ ಡಾಲರ್ ಒಪ್ಪಂದದಡಿ ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿದೆ. ಎಂಡಿಎಲ್‌ನ ಈ ನಿರ್ಧಾರ ಅದರ ಮೊದಲ ಅಂತಾರಾಷ್ಟ್ರೀಯ ಉದ್ಯಮವನ್ನು ಗುರುತಿಸುವುದಲ್ಲದೆ ದೇಶೀಯ ಕಂಪನಿಯಿಂದ ಜಾಗತಿಕ ಪ್ರಾದೇಶಿಕ ಕಡಲ ಪಾಲುದಾರನಾಗಿ ರೂಪುಗೊಳ್ಳುವತ್ತ ಪ್ರಮುಖ ಮೈಲಿಗಲ್ಲಾಗಿದೆ ಎಂದು ಪರಿಗಣಿಸಲಾಗಿದೆ.

********

ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ ಮನ್ ಕಿ ಬಾತ್‌ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ ಬೆಳಗ್ಗೆ ೧೧ ಗಂಟೆಗೆ ದೇಶ-ವಿದೇಶಗಳಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೩ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲಿ ನೀವು ಈ ಕಾರ್ಯಕ್ರಮವನ್ನು ಕೇಳಬಹುದು.

********

ಆಪರೇಷನ್ ಸಿಂಧು ಅಡಿಯಲ್ಲಿ ಇದುವರೆಗೆ ಇರಾನ್‌ನಿಂದ ೩ ಸಾವಿರದ ೫೯೭ ಹಾಗೂ ಇಸ್ರೇಲ್‌ನಿಂದ ೮೧೮ ಮಂದಿ ಸೇರಿದಂತೆ ಒಟ್ಟು ೪ ಸಾವಿರದ ೪೧೫ ಭಾರತೀಯ ಪ್ರಜೆಗಳನ್ನು ಸ್ಥಳಾಂತರಿಸಲಾಗಿದೆ. ೧೪ ಒಸಿಐ ಕಾರ್ಡ್‌ದಾರರು, ೯ ನೇಪಾಳದ ಪ್ರಜೆಗಳು, ೪ ಶ್ರೀಲಂಕಾ ಪ್ರಜೆಗಳು ಮತ್ತು ಓರ್ವ ಭಾರತೀಯ ನಾಗರಿಕನ ಇರಾನ್ ಮೂಲದ ಪತ್ನಿಯನ್ನೂ ಸಹ ಸ್ಥಳಾಂತರಿಸಲಾಗಿದೆ.

********

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗುಜರಾತ್‌ನ ಗಾಂಧಿನಗರದಲ್ಲಿರುವ ಮಾಹಿತಿ ಮತ್ತು ಗ್ರಂಥಾಲಯ ಜಾಲ - ಇನ್‌ಫ್ಲಿಬ್ ನೆಟ್ ಕೇಂದ್ರಕ್ಕೆ ಭೇಟಿ ನೀಡಿ, ಗ್ರಂಥಾಲಯಗಳ ಅಭಿವೃದ್ಧಿ ಪರಿಶೀಲಿಸಿದರು. ಈ ಕುರಿತಂತೆ ಸಾಮಾಜಿಕ ಜಾಲತಾಣದಲ್ಲಿ ಅವರು, ಇನ್ಫ್ಲಿಬ್‌ನೆಟ್ ಕೇಂದ್ರವು ನವೀನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಗ್ರಂಥಾಲಯ ವ್ಯವಸ್ಥೆಯನ್ನು ನಿರಂತರವಾಗಿ ಅಭಿವೃದ್ಧಿಪಡಿಸುತ್ತಿರುವುದಾಗಿ ತಿಳಿಸಿದರು. ತಮ್ಮ ಪ್ರವಾಸದ ಭಾಗವಾಗಿ ಸಚಿವರು, 'ಸಸ್ತು ಸಾಹಿತ್ಯ ವರ್ಧಕ ಕಾರ್ಯಾಲಯ' ಮೊಬೈಲ್ ಆಪ್ ಅನ್ನು ಬಿಡುಗಡೆ ಮಾಡಿದರು. ಈ ಆಪ್ ಪುಸ್ತಕ ಪ್ರಿಯರಿಗೆ ತಮ್ಮ ನೆಚ್ಚಿನ ಪುಸ್ತಕಗಳನ್ನು ಸುಲಭವಾಗಿ ಓದಲು ಉಪಯುಕ್ತವಾಗಲಿದೆ ಎಂದು ಅವರು ಹೇಳಿದರು.

********

ದೇಶದ ಕೃಷಿ ಮತ್ತು ಸಂಬಂಧಿತ ವಲಯಗಳು ಪ್ರಸ್ತುತ ಬೆಲೆಗಳಲ್ಲಿ ಮೌಲ್ಯವರ್ಧನೆ ದರದಲ್ಲಿ ಜಿವಿಎಯಲ್ಲಿ ಗಮನಾರ್ಹ ೨೨೫ ಪ್ರತಿಶತದಷ್ಟು ಏರಿಕೆ ಕಂಡಿವೆ. ೨೦೧೧-೧೨ರಲ್ಲಿ ಒಂದು ಸಾವಿರದ ೫೦೨ ಸಾವಿರ ಕೋಟಿ ರೂಪಾಯಿ ಇದ್ದ ಈ ದರ ೨೦೨೩-೨೪ರಲ್ಲಿ ೪ ಸಾವಿರದ ೮೭೮ ಸಾವಿರ ಕೋಟಿ ರೂಪಾಯಿಗೆ ತಲುಪಿದೆ ಎಂದು ರಾಷ್ಟ್ರೀಯ ಅಂಕಿ-ಅಂಶ ಕಾರ್ಯಾಲಯ ತಿಳಿಸಿದೆ. ಸ್ಥಿರ ಬೆಲೆಗಳಲ್ಲಿ ಉತ್ಪಾದನೆಯ ಒಟ್ಟು ಮೌಲ್ಯ ಶೇಕಡ ೫೫ರಷ್ಟು ಏರಿಕೆಯಾಗಿ, ೨ ಸಾವಿರದ ೯೪೯ ಸಾವಿರ ಕೋಟಿ ರೂಪಾಯಿಗೆ ತಲುಪಿದೆ.

********

ದಕ್ಷಿಣ ಕೊಲ್ಕತ್ತಾದ ಕಾನೂನು ವಿದ್ಯಾರ್ಥಿನಿಯೊಬ್ಬಳ ಮೇಲೆ ಕಾಲೇಜು ಆವರಣದಲ್ಲಿ ನಡೆಯಿತೆನ್ನಲಾದ ದೌರ್ಜನ್ಯ ಘಟನೆ ವರದಿಯನ್ನು ರಾಷ್ಟ್ರೀಯ ಮಹಿಳಾ ಆಯೋಗ, ಸ್ವ-ಪ್ರೇರಣೆಯಿಂದ ಪರಿಗಣಿಸಿದೆ. ಆಯೋಗ, ಕೊಲ್ಕತ್ತಾ ಪೊಲೀಸ್ ಆಯುಕ್ತರಿಗೆ ಪತ್ರ ಬರೆದು ಘಟನೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಈ ಬಗ್ಗೆ ಮೂರು ದಿನಗಳ ಒಳಗೆ ವಿವರವಾದ ಕ್ರಮ ಕೈಗೊಂಡ ವರದಿ ಸಲ್ಲಿಸುವಂತೆ ಸೂಚಿಸಿದೆ.

********

ಕೆನಡಾದೊಂದಿಗಿನ ವ್ಯಾಪಾರ ಮಾತುಕತೆಗಳನ್ನು ಕೊನೆಗೊಳಿಸುವ ಜೊತೆಗೆ ಆ ದೇಶಕ್ಕೆ ಹೊಸ ಸುಂಕದರವನ್ನು ಘೋಷಿಸುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ತಂತ್ರಜ್ಞಾನ ಕಂಪನಿಗಳ ಮೇಲೆ ಕೆನಡ ವಿಧಿಸುತ್ತಿರುವ ಅತಿಯಾದ ಡಿಜಿಟಲ್ ಸೇವಾ ತೆರಿಗೆಗೆ ಪ್ರತಿಯಾಗಿ ಈ ಕ್ರಮ ಕೈಗೊಳ್ಳುತ್ತಿರುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

********

ಬಿಹಾರದಲ್ಲಿ ಇಂದು ನಡೆಯುತ್ತಿರುವ ಪುರಸಭೆ ಚುನಾವಣೆಗಳು ಮತ್ತು ಉಪಚುನಾವಣೆಗಳಲ್ಲಿ ಮೊಬೈಲ್ ಅಪ್ಲಿಕೇಶನ್‌ಗಳನ್ನು ಬಳಸಿಕೊಂಡು ಇ-ಮತದಾನ ಸೌಲಭ್ಯಗಳನ್ನು ಪ್ರಾರಂಭಿಸಿದ ದೇಶದ ಮೊದಲ ರಾಜ್ಯವಾಗಿದೆ. ಆರು ನಗರ ಪಂಚಾಯತ್ ಮತ್ತು ಇತರ ೩೬ ವಿವಿಧ ಪುರಸಭೆಗಳಲ್ಲಿ ಮತದಾನ ನಡೆಯುತ್ತಿದೆ. ಬೆಳಿಗ್ಗೆ ೭ ಗಂಟೆಗೆ ಮತದಾನ ಪ್ರಾರಂಭವಾಗಿದ್ದು ಸಂಜೆ ೫ ಗಂಟೆಗೆ ಕೊನೆಗೊಳ್ಳುತ್ತದೆ. ಇ-ಮತದಾನಕ್ಕಾಗಿ, ಮತದಾರರು ಮಧ್ಯಾಹ್ನ ೧ ಗಂಟೆಯಿಂದ ತಮ್ಮ ಮನೆಗಳಿಂದಲೇ ಮತ ಚಲಾಯಿಸಬಹುದು. ಬಿಹಾರದ ಚುನಾವಣಾ ಆಯುಕ್ತ ದೀಪಕ್ ಪ್ರಸಾದ್ ಇಂದಿನ ದಿನವನ್ನು ಐತಿಹಾಸಿಕ ದಿನ ಎಂದು ಹೇಳಿದ್ದಾರೆ.

********

ತಾಷ್ಕೆಂಟ್ ನಲ್ಲಿ ನಡೆದ ಉಜ್ಬೇಕಿಸ್ತಾನ್ ಮಾಸ್ಟರ್ಸ್ ಕಪ್ ಚೆಸ್‌ನ ೨ ನೇ ಆವೃತ್ತಿಯ ಪ್ರಶಸ್ತಿಯನ್ನು ಭಾರತೀಯ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ತಮ್ಮದಾಗಿಸಿಕೊಂಡಿದ್ದಾರೆ. ಈ ಪ್ರಶಸ್ತಿಯ ಗೆಲುವಿನೊಂದಿಗೆ, ೧೯ ವ?ದ ಅವರು ಪ್ರತಿಷ್ಠಿತ ಅಂತರರಾಷ್ಟ್ರೀಯ ಪಂದ್ಯಾವಳಿಯನ್ನು ಗೆಲ್ಲುವುದು ಮಾತ್ರವಲ್ಲದೆ, ತಮ್ಮ ವೃತ್ತಿಜೀವನದಲ್ಲಿ ಮೊದಲ ಬಾರಿಗೆ ಲೈವ್ ಕ್ಲಾಸಿಕಲ್ ಫಿಡೆ ಶ್ರೇಯಾಂಕದಲ್ಲಿ ಅಗ್ರ ಶ್ರೇಯಾಂಕಿತ ಭಾರತೀಯ ಚೆಸ್ ಆಟಗಾರರಾಗಿ ಹೊರಹೊಮ್ಮಿದ್ದಾರೆ.ಪಂದ್ಯಾವಳಿಯ ಅಂತಿಮ ಸುತ್ತಿನಲ್ಲಿ ಉಜ್ಬೇಕಿಸ್ತಾನ್‌ನ ನೋಡಿರ್ಬೆಕ್ ಅಬ್ದುಸತ್ತೊರೊವ್ ಅವರನ್ನು ಸೋಲಿಸುವ ಮೂಲಕ ಪ್ರಜ್ಞಾನಂದ ಈ ಸಾಧನೆಯನ್ನು ಮಾಡಿದ್ದಾರೆ.

********

ನಾಟಿಂಗ್‌ಹ್ಯಾಮ್‌ನ ಟ್ರೆಂಟ್ ಬ್ರಿಡ್ಜ್‌ನಲ್ಲಿಂದು ಭಾರತ ಹಾಗೂ ಇಂಗ್ಲೆಂಡ್ ವನಿತೆಯ ತಂಡಗಳ ನಡುವಿನ ಐದು ಪಂದ್ಯಗಳ ಟಿ-೨೦ ಅಂತಾರಾಷ್ಟ್ರೀಯ ಕ್ರಿಕೆಟ್ ಸರಣಿಗೆ ಚಾಲನೆ ದೊರೆಯಲಿದೆ. ಇಂದು ನಡೆಯುತ್ತಿರುವ ಮೊದಲ ಪಂದ್ಯ ಭಾರತೀಯ ಕಾಲಮಾನ ಸಂಜೆ ೭ ಗಂಟೆಗೆ ಆರಂಭವಾಗಲಿದೆ. ೨೦ ಓವರ್ ಮಾದರಿಯ ಪಂದ್ಯದಲ್ಲಿ ಉಭಯ ತಂಡಗಳು ಡಿಸೆಂಬರ್ ೨೦೨೩ರ ಬಳಿಕ ಮೊದಲ ಬಾರಿಗೆ ಮುಖಾಮುಖಿಯಾಗುತ್ತಿವೆ. ಉಭಯ ತಂಡಗಳು ತಮ್ಮ ತಮ್ಮ ಇತ್ತೀಚಿನ ಪಂದ್ಯಗಳಲ್ಲಿ ಪ್ರಬಲ ಪ್ರದರ್ಶನಗಳೊಂದಿಗೆ ಗೆಲುವು ಸಾಧಿಸಿ, ಹೆಚ್ಚಿನ ವಿಶ್ವಾಸ ಹಾಗೂ ಹುಮ್ಮಸ್ಸಿನೊಂದಿಗೆ ಕಣಕ್ಕಿಳಿಯುತ್ತಿವೆ.

ಈ ಸರಣಿ ಲಂಡನ್‌ನಲ್ಲಿ ೨೦೨೬ರ ಜೂನ್‌ನಲ್ಲಿ ಆರಂಭವಾಗಲಿರುವ ಮಹಿಳಾ ವಿಶ್ವಕಪ್‌ಗೆ ಪೂರ್ವಭಾವಿ ಅಭ್ಯಾಸವೆಂದು ಪರಿಗಣಿಸಲಾಗಿದೆ.

********

ಕೊಲಂಬೋದಲ್ಲಿ ನಡೆಯುತ್ತಿರುವ ಏಷ್ಯನ್ ಸ್ನೂಕರ್ ತಂಡ ಚಾಂಪಿಯನ್‌ಶಿಪ್‌ನಲ್ಲಿ ಕತಾರ್ ವಿರುದ್ಧ ೩-೦ ಅಂತರದ ಭರ್ಜರಿ ಗೆಲುವಿನೊಂದಿಗೆ ಭಾರತ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದೆ. ಭಾರತದ ಪಂಕಜ್ ಅಡ್ವಾಣಿ, ಮಾಜಿ ವಿಶ್ವ ಚಾಂಪಿಯನ್ ಅಲಿ ಅಲ್ ಒಬೈದ್ಲಿ ಅವರ ವಿರುದ್ಧ ೭೨-೨೪ ಅಂಕಗಳ ದೊಡ್ಡ ಅಂತರದ ಗೆಲುವಿನ ಮೂಲಕ ಭಾರತದ ಅಭಿಯಾನಕ್ಕೆ ಉತ್ತಮ ಆರಂಭ ನೀಡಿದರು. ಬಳಿಕ ಆದಿತ್ಯ ಮೆಹ್ತಾ, ಬಷರ್ ಅಬ್ದುಲ್ ಮಜೀದ್ ವಿರುದ್ಧ ೧೧೫-೫ ಅಂತರದಲ್ಲಿ ಗೆಲುವು ಸಾಧಿಸಿದರು. ಡಬಲ್ಸ್ ವಿಭಾಗದಲ್ಲಿ ಅಡ್ವಾಣಿ ಮತ್ತು ಬ್ರಿಜೇಶ್ ದಮನಿ ಜೋಡಿ, ಕತಾರ್ ಜೋಡಿಯ ವಿರುದ್ಧ ೭೨-೫ ಅಂಕಗಳ ಅಂತರದಲ್ಲಿ ಗೆಲುವು ದಾಖಲಿಸಿತು. ಭಾರತ ಈಗ ಸೆಮಿಫೈನಲ್‌ನಲ್ಲಿ ಹಾಂಕಾಂಗ್ ಮತ್ತು ಬಹ್ರೇನ್ ನಡುವಿನ ಪಂದ್ಯದ ವಿಜೇತ ತಂಡದೊಂದಿಗೆ ಫೈನಲ್ ಪ್ರವೇಶಿಸಲು ಸೆಣಸಾಟ ನಡೆಸಲಿದೆ.

********